ಓ. ಎಸ್. ನಂಃ 215/2024

ಪಿ. ಡಬ್ಲ್ಯೂಃ 1

ದಿಃ18-6-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎ ಜಿ ಪಿ ಪ್ರತಿವಾದಿ ಪರ ವಕೀಲರಿಂದ ಃ

ತಹಶಿಲ್ದಾರ ಕಚೇರಿಗೆ ನೀಡಿದ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ತಹಶಿಲ್ದಾರ ಅವರು ಸ್ವಿಕೃತಿ ಎಂದು ಬರೆದಿಲ್ಲ ಎಂದರೆ ಸರಿ. ಅಬಿಲೇಕಾಲಯದಲ್ಲಿ ಜನ್ಮ ದಾಖಲೆ ಸಿಗಲಿಲ್ಲ ಎಂದು ಹೇಗೆ ತಿಳಿಯಿತು ಎಂದರೆ ಸಾಕ್ಷಿಯು ಜನ್ಮ ದಾಖಲೆ ನೀಡಲು ಅರ್ಜಿ ಸಲ್ಲಿಸಿದ್ದೆ ಅವರು ಉತ್ತರಿಸಿಲ್ಲ ಎಂದರು . ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜುರಪಡಿಸಿಲ್ಲ. ಉತ್ತರ ಕೊಡಲಿಲ್ಲ ಎಂದು ಡಿ ಸಿ ಅವರಿಗೆ ನಾನು ಕ್ರಮ ಕೈಗೊಳ್ಳಲು ಅರ್ಜಿ ನೀಡಿಲ್ಲ . ತಹಶಿಲ್ದಾರ ಉತ್ತರ ಕೊಡದೇ ಇರಲು ಅವರ ಮೇಲೆ ಮಾತ್ರ ದಾವೆ ಮಾಡಲು ಕಾರಣ ಉಂಟಾಗಿದ್ದು ಇತರೆ ಪ್ರತಿವಾದಿಯವರ ಮೇಲೆ ದಾವೆ ಕಾರಣ ಉಂಟಾಗಿಲ್ಲ ಎಂದರೆ ಸರಿ. ನನಗೆ ದಾವೆ ಮಾಡಲು ಕಾರಣ ಉಂಟಾಗದಿದ್ದರೂ ಸುಳ್ಳು ದಾವೆ ಮಾಡಿದ್ದೆನೆ ಎಂದರೆ ಸರಿಯಲ್ಲ. ಶಾಲೆಗೆ ದಾಖಲು ಮಾಡುವಾಗ ನನ್ನ ತಂದೆ ತಾಯಿ ಹೇಳಿದಂತೆ ನನ್ನ ಹೆಸರು ನಮೂದು ಮಾಡಿದ್ದಾರೆ ಎಂದರೆ ಸರಿ. 10 ನೇ ತರಗತಿ ಆದ ನಂತರ ನನ್ನ ಹೆಸರು ಅಜಮೀರ ಅಲ್ಲ ಮಹಮದ ಅಜಮೀರ ಎಂದು ಗೊತ್ತಾಗಿದೆ . 2008 ರಲ್ಲಿ ನನ್ನ 10 ನೇ ತರಗತಿ ಮುಗಿದಿದೆ. 2008 ರಿಂದ 2024 ರ ಒಳಗೆ ನ್ಯಾಯಾಲಯಕ್ಕೆ ಬರಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಅಲಬ್ಯ ಪ್ರಮಾಣ ಪತ್ರವನ್ನು ದಾವೆ ಜೊತೆ ಹಾಜರುಪಡಿಸಿಲ್ಲ ಎಂದರೆ ಸರಿ. ನನಗೆ ದಾವೆ ಮಾಡಲು ಕಾರಣ ಉಂಟಾಗದಿದ್ದರೂ ಸುಳ್ಳು ದಾವೆ ಮಾಡಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.